**ದಿನಾಂಕಃ 30.07.2026** ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**<u>ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ.ಎನ್.ವಿ.ಎನ್. ವಕೀಲರಿಂದಃ</u>**

ಅಪಘಾತ ನಡೆಯುವ ದಿನ ನನ್ನ ಗಂಡ ಚಂದ್ರಶೇಖರ್ ರವರು ಲಾವಣ್ಯ ಎಂಬುವವರ ಜೊತೆ ಅರೇಹಳ್ಳಿ ಗೇಟ್ ನಲ್ಲಿ ಮಾತನಾಡುತ್ತಿರುತ್ತಾರೆ. ಅಪಘಾತವು ಶಿರಾ-ಮಧುಗಿರಿ ಮುಖ್ಯ ರಸ್ತೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ವಾಹನಗಳ ಸಂಚಾರ ಹೆಚ್ಚಾಗಿರುತ್ತದೆ ಎಂದರೆ ಸಾಕ್ಷಿಯು ಬೆಳಗಿನ ಜಾವ 6.30 ರಲ್ಲಿ ವಾಹನಗಳ ಸಂಚಾರ ಇರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಗಂಡ ಚಂದ್ರಶೇಖರ್ ನಿಗೆ ತೀವ್ರ ಸ್ವರೂಪದ ಗಾಯಗಳು ಮತ್ತು ಲಾವಣ್ಯ ಮತ್ತು ಶ್ರೀನಿವಾಸ್ ರವರಿಗೆ ಸಣ್ಣ ಪುಟ್ಟ ಗಾಯಗಳಾಗಿರುತ್ತದೆ. ಶ್ರೀನಿವಾಸ್ ರವರು ದ್ವಿಚಕ್ರ ವಾಹನದಲ್ಲಿ ಬಂದು ವಾಹನ ನಿಲ್ಲಿಸಿಕೊಂಡು ನನ್ನ ಗಂಡನಾದ ಚಂದ್ರಶೇಖರ್ ರವರ ಜೊತೆ ಮಾತನಾಡುತ್ತಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಗಂಡ ಚಂದ್ರಶೇಖರ್ ರವರಿಗೆ ಬೇರೆ ಕಡೆ ಅಪಘಾತವಾಗಿದ್ದರು ಸಹ ಶಿರಾ ಗೇಟ್ ನಲ್ಲಿ ಆಗಿರುತ್ತದೆ ಎಂದು ಹೇಳುತ್ತಿರುವುದು ಸುಳ್ಳು ಎಂದರೆ ಸರಿಯಲ್ಲ. ಅಪಘಾತ ಪಡಿಸಿದ ಕಾರು ಎಂದು ಹೇಳುವ ಚಾಲಕ ಶ್ರೀನಿವಾಸ್ ಪರಿಚಯ ಎಂದರೆ ಸರಿಯಲ್ಲ.

2. ಅಪಘಾತದ ನಂತರ ನನ್ನ ಗಂಡ ಚಂದ್ರಶೇಖರ್ ರವರನ್ನು ಶಿರಾ ಸಾರ್ವಜನಿಕ ಆಸ್ಪತ್ರೆಗೆ ನಂತರ ತುಮಕೂರಿನ ಸಿದ್ದಗಂಗ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ನಾನು 3 ಆಸ್ಪತ್ರೆಗಳ ವೈದ್ಯರಿಗೆ ಮತ್ತು ಪೊಲೀಸರಿಗೆ ಅಪಘಾತವಾಗಿರುವ ಬಗ್ಗೆ ಹೇಳಿಕೆ ಕೊಟ್ಟಿರುತ್ತೇನೆ. ಶ್ರೀನಿವಾಸ್ ಮತ್ತು ಲಾವಣ್ಯ ಪೊಲೀಸ್ ಗೆ ದೂರು ಕೊಟ್ಟಿರುವ ಬಗ್ಗೆ ಗೊತ್ತಿಲ್ಲ. ನಾನು ಹೇಳಿದಂತೆ ಅಪಘಾತವಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪರಿಹಾರ ಪಡೆಯಲು 1 ನೇ ಎದುರುದಾರರ ವಾಹನವನ್ನು ಸೇರಿಸಿ ಸುಳ್ಳು ದೂರನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ದೂರನ್ನು ಕೊಡಲು ನಮ್ಮ ಕುಟುಂಬದವರಿಗೆ ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ.

3. ನನ್ನ ಗಂಡನಾದ ಚಂದ್ರಶೇಖರ್ ರವರಿಗೆ 52 ವರ್ಷ ವಯಸ್ಸು ಎಂದರೆ ಸರಿಯಲ್ಲ. ನನ್ನ ಗಂಡ ವ್ಯವಸಾಯ ಮತ್ತು ಕಡಲೆಕಾಯಿ ವ್ಯಾಪಾರದಿಂದ ಮಾಸಿಕ ರೂ.50 ಸಾವಿರದ ಬಗ್ಗೆ ದಾಖಲೆ ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ನನ್ನ ಗಂಡ ಚಂದ್ರಶೇಖರ್ ರವರ ಆಧಾರ ಕಾರ್ಡ್ ಇದ್ದು ಅದನ್ನು ನ್ಯಾಯಾಲಯಕ್ಕೆ ಕೊಡಲು ತೊಂದರೆ ಇಲ್ಲ. ನನ್ನ ಅತ್ತೆ ಮಾವಂದಿರಿಗೆ 3 ಜನ ಮಕ್ಕಳು. 4 ಮತ್ತು 5ನೇ ಅರ್ಜಿದಾರರು ನಮ್ಮ ಜೊತೆ ವಾಸ ಇಲ್ಲ ಎಂದರೆ ಸರಿಯಲ್ಲ. ನಿಪಿ.8 ರಿಂದ 12 ರ ಬಿಲ್ಲುಗಳನ್ನು ಸೃಷ್ಠಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಗಂಡನ ಬಿಡುಗಡೆ ಪ್ರಮಾಣ ಪತ್ರ ಮತ್ತು ಸಾವಿನ ವರದಿ ಬಗ್ಗೆ ದಾಖಲೆ ಕೊಡಲು ಯಾವುದೇ ತೊಂದರೆ ಇಲ್ಲ. ನಾನು ಪರಿಹಾರ ಪಡೆಯಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಹೆಚ್ಚುವರಿ ಹಿ.ಸಿ.ಜೆ. ಮತ್ತು ಅಪರ ಎಂ.ಎ.ಸಿ.ಟಿ.
ಶಿರಾ.